CC 1539/2022
P**W1**

ದಿನಾಂಕಃ-24.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟಿ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಡಿ ಎಲ್ ರವರಿಂದಃ-**

1. ನಾನು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳನ್ನು ನನ್ನ ವಕೀಲರ ಮೂಲಕ ನಾನೇ ಬರೆಸಿರುತ್ತೇನೆ. ಆರೋಪಿ ನಿಮಗೆ ಹೇಗೆ ಪರಿಚಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾವಿಬ್ಬರೂ ಅಕ್ಕಪಕ್ಕದ ಊರಿನವರು ಹಾಗಾಗಿ ಸುಮಾರು 20 ವರ್ಷಗಳಿಂದ ನನಗೆ ಅವರ ಪರಿಚಯವಿದೆ ಎಂದು ನುಡಿಯುತ್ತಾರೆ. ಆರೋಪಿಯದ್ದು ವಿಡಮುಡುದೊಡ್ಡಿ. ಪ್ರಮಾಣ ಪತ್ರದಲ್ಲಿ ಮತ್ತು ದೂರಿನಲ್ಲಿ ಆರೋಪಿ ನಿಮಗೆ 20 ವರ್ಷದಿಂದ ಪರಿಚಯ ಎಂಬ ಸಂಗತಿಯನ್ನು ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಆರೋಪಿ ನನಗೆ ಪರಿಚಯ ಎಂದು ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

2. ಆರೋಪಿ ನಿಮಗೆ ಎಷ್ಟು ಹಣ ಕೊಡಬೇಕಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆರೋಪಿ ನನಗೆ ಒಟ್ಟು 7 ಲಕ್ಷದ 24 ಸಾವಿರ ರೂಪಾಯಿ ಕೊಡಬೇಕಿತ್ತು ಅದರ ಪೈಕಿ 3 ಲಕ್ಷ 50 ಸಾವಿರ ರೂಪಾಯಿಯನ್ನು ಆರೋಪಿ ಈಗಾಗಲೇ ಅವರ ತಂದೆಯ ಚೆಕ್ಕಿನ ಮೂಲಕ ಮತ್ತು ತಮ್ಮ ಚೆಕ್ಕಿನ ಮೂಲಕ ನನಗೆ ಕೊಟ್ಟಿರುತ್ತಾರೆ, ಆರೋಪಿ ಇನ್ನು 3 ಲಕ್ಷದ 74ಸಾವಿರ ರೂಪಾಯಿ ಕೊಡುವುದು ಬಾಕಿ ಇದೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ 2018 ರ ಮೇ ತಿಂಗಳಲ್ಲಿ ಕೊಟ್ಟಿರುತ್ತೇನೆ. ದಿನಾಂಕವನ್ನು ಖಚಿತವಾಗಿ ಹೇಳಲು ನನಗೆ

ಸಾಧ್ಯವಿಲ್ಲ. ಆರೋಪಿ ಜಮೀನು ಖರೀದಿಸುವ ಉದ್ದೇಶಕ್ಕಾಗಿ ನನ್ನಿಂದ ಸಾಲ ಪಡೆದುಕೊಂಡಿದ್ದರು. ಆರೋಪಿ ನನಗೆ 8 ಲಕ್ಷ ರೂಪಾಯಿ ಸಾಲ ಕೇಳಿದ್ದರು. ಆರೋಪಿ ನನಗೆ 2017 ರ ಡಿಸೆಂಬರ್ ತಿಂಗಳಲ್ಲಿ ಕೇಳಿದ್ದರು ನಾನು ಅವರಿಗೆ ಹಣವನ್ನು 2018 ರಲ್ಲಿ ಕೊಟ್ಟಿರುತ್ತೇನೆ. ಈ ವಿಚಾರವನ್ನು ನನ್ನ ದೂರಿನಲ್ಲಿ ಆಗಲೀ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆಗಲೀ ಹೇಳಿ ಬರೆಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಇದರ ಬಗ್ಗೆ ಪತ್ರವಿದೆ ತಂದು ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ.

3. ಆರೋಪಿ ನನಗೆ ಸಾಲ ಕೇಳಿದ ಸಮಯದಲ್ಲಿ ನಾನು ಮತ್ತು ಆರೋಪಿ ಮಾತ್ರ ಇದ್ದೇವು ಬೇರೆ ಯಾರು ಇರಲಿಲ್ಲ. ನಾನು ಆರೋಪಿಗೆ 7 ಲಕ್ಷದ 24 ಸಾವಿರ ರೂಪಾಯಿ ಹಣ ಸಾಲವಾಗಿ ಕೊಟ್ಟಿರುತ್ತೇನೆ. ಆ ದಿನ ಸಾಲವನ್ನು ಆರೋಪಿಗೆ ನೀವು ನಗದಾಗಿ ಕೊಟ್ರ ಅಥವಾ ಚೆಕ್ಕಿನ ಮೂಲಕ ಕೊಟ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಗದಾಗಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ 7 ಲಕ್ಷ 24 ಸಾವಿರ ರೂಪಾಯಿ ನಗದು ಹಣವನ್ನು ಸಾಲವಾಗಿ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಲಕ್ಷಕ್ಕೂ ಅಧಿಕವಾದ ಮೊತ್ತದ ಹಣಕಾಸಿನ ವ್ಯವಹಾರವನ್ನು ನಗದು ಮೂಲಕ ಮಾಡಬಾರದು ಎಂದು ಆರ್ ಬಿ ಐ ರವರ ನಿಯಮ ಇದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ಆ ದಿನ ನಾನು 500 ರೂಪಾಯಿ ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ. 500 ರೂಪಾಯಿ ಮುಖಬೆಲೆಯ ಒಟ್ಟು ಎಷ್ಟು ನೋಟುಗಳನ್ನು ಕೊಟ್ಟಿರುತ್ತೇನೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನಾನು 500 ರೂಪಾಯಿಯ ಹೊಸನೋಟುಗಳನ್ನು ಕೊಟ್ಟಿರುತ್ತೇನೆ. ಈ ರೀತಿ ಆರೋಪಿಗೆ ಹಣ ಕೊಡುವಾಗ ಯಾರು ಯಾರು ಇದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಯಾರೂ ಇರಲಿಲ್ಲ ನಾನು ಮತ್ತು ಆರೋಪಿ ಮಾತ್ರ ಇದ್ದೇವು ಎಂದು ನುಡಿಯುತ್ತಾರೆ. ಸಾಲ

ಕೊಡುವ ಸಮಯದಲ್ಲಿ ಆಗಿದಂತಹ ಪತ್ರಕ್ಕೆ ಸಾಕ್ಷಿದಾರರು ಸಹ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ಸಾಕ್ಷಿದಾರರು ಯಾರೂ ಸಹಿ ಹಾಕಿಲ್ಲ. ಸಾಲದ ಪತ್ರಕ್ಕೆ ಸಾಕ್ಷಿದಾರರು ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಕೇವಲ 5 ಲಕ್ಷ ರೂಪಾಯಿ ಸಾಲ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಅವರಿಗೆ ಕೊಟ್ಟದ್ದು 7 ಲಕ್ಷ 24 ಸಾವಿರ ರೂಪಾಯಿ ಎಂದು ನುಡಿಯುತ್ತಾರೆ. ಸದರಿ ಸಾಲದ ಪತ್ರದಲ್ಲಿ ಆರೋಪಿಗೆ 7 ಲಕ್ಷದ 24 ಸಾವಿರ ರೂಪಾಯಿ ಕೊಡಲಾಗಿರುತ್ತದೆ ಎಂಬ ಸಂಗತಿಯನ್ನು ನೀವು ಬರೆಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ  ಸಾಕ್ಷಿಯು ಆ ರೀತಿ ಬರೆಸಿಲ್ಲ ಆದರೆ 6 ಲಕ್ಷ ರೂಪಾಯಿ ಕೊಟ್ಟಿರುವುದಾಗಿ ಬರೆಸಿರುತ್ತೇನೆ, ಮಾರನೇ ದಿನ  1 ಲಕ್ಷ 24 ಸಾವಿರ ರೂಪಾಯಿ ಆರೋಪಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.  ಒಂದು ವೇಳೆ ನಾನು ಆರೋಪಿಗೆ 7 ಲಕ್ಷದ 24 ಸಾವಿರ ರೂಪಾಯಿ ಹಣ ಸಾಲವಾಗಿ ಕೊಟ್ಟಿದ್ದೇಆಗಿದ್ದರೆ ಅದೇ ದಿನ ಸಾಲದ ಕರಾರು ಪತ್ರದಲ್ಲಿ ಆ ಮೊತ್ತವನ್ನು ನೀವು ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆ ದಿನ 6 ಲಕ್ಷ ರೂಪಾಯಿ ಹಣ ಕೊಟ್ಟ ಬಗ್ಗೆ ಬರೆಸಿರಿ ನಂತರ ಬೇರೆ ಹಣದ ಬಗ್ಗೆ ಬರೆದುಕೊಳ್ಳೋಣಾ ಎಂದು ಆರೋಪಿ ತಿಳಿಸಿದ್ದರು ಹಾಗಾಗಿ 6 ಲಕ್ಷ ರೂಪಾಯಿ ಹಣ ಕೊಟ್ಟ ಬಗ್ಗೆ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು 6 ಲಕ್ಷ ರೂಪಾಯಿ ಒಮ್ಮೆ , 1 ಲಕ್ಷ 24 ಸಾವಿರ ರೂಪಾಯಿ ಒಮ್ಮೆ ಆರೋಪಿಗೆ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

5. ಆರೋಪಿ ಈಗಾಗಲೇ ನಿಮಗೆ 3 ಲಕ್ಷ ರೂಪಾಯಿ ಹಣ ಹಿಂದಿರುಗಿಸಿರುತ್ತಾರ ಎಂದರೆ ಸಾಕ್ಷಿಯು ಹೌದು ಅವರ ತಂದೆಯ ಚೆಕ್ಕಿನ ಮೂಲಕ ನನಗೆ ಆರೋಪಿ 3 ಲಕ್ಷ ರೂಪಾಯಿ ಹಣ ಪಾವತಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಲದ ಕರಾರುಪತ್ರದಲ್ಲಿ 5 ಲಕ್ಷ ರೂಪಾಯಿ ಹಣ ಆರೋಪಿಗೆ ಸಾಲ ಕೊಟ್ಟಿರುತ್ತೇನೆ ಎಂದು ನಾನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಲದ ಕರಾರು ಪತ್ರಕ್ಕೆ ಕೃಷ್ಣಮೂರ್ತಿ ಮತ್ತು ಕರಿಯಪ್ಪ ಎನ್ನುವವರು ಸಹ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಇನ್ನು ಉಳಿದ 2 ಲಕ್ಷ

ರೂಪಾಯಿಗಳ ಪೈಕಿ ನಿಮಗೆ 50 ಸಾವಿರ ರೂಪಾಯಿ ಹಣವನ್ನು ಅವರ ಬ್ಯಾಂಕಿನ ಚೆಕ್ಕಿನ ಮೂಲಕ ನಿಮಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಆರೋಪಿ ನನಗೆ ಅವರ ಬ್ಯಾಂಕಿನ ಚೆಕ್ಕಿನ ಮೂಲಕ 50 ಸಾವಿರ ಹಣವನ್ನು ಕೊಟ್ಟಿರುವುದು ನಿಜ ಎಂದು ನುಡಿಯುತ್ತಾರೆ.

6. ನಾನು ಮತ್ತು ಆರೋಪಿ ಒಳ್ಳೆಯ ಸ್ನೇಹಿತರು ಎಂದರೆ ಸರಿ. ಉಳಿದ 1 ಲಕ್ಷ 50 ಸಾವಿರ ರೂಪಾಯಿ ಹಣಕ್ಕೆ 50 ಸಾವಿರ ರೂಪಾಯಿ ಬಡ್ಡಿ ಸೇರಿಸಿ ಒಟ್ಟು 2 ಲಕ್ಷ ರೂಪಾಯಿಯನ್ನು ನಗದಾಗಿ ಆರೋಪಿ, ಆರೋಪಿಯ ತಂದೆ ಮತ್ತು ಅವರ ಚಿಕ್ಕಪ್ಪ ಕೃಷ್ಣಮೂರ್ತಿರವರು ನಮ್ಮ ಮನೆಗೆ ತಂದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಮ್ಮ ಮನೆಯಲ್ಲಿ ನಿಮ್ಮ ತಾಯಿ ಸಹ ಹಾಜರಿದ್ದರು ಎಂದರೆ ಸರಿಯಲ್ಲ. ಈ ರೀತಿ 2 ಲಕ್ಷ ರೂಪಾಯಿ ಹಣವನ್ನು ನನಗೆ ಕೊಡುವ ಸಮಯದಲ್ಲಿ ಸತೀಶ್ ಎನ್ನುವವರು ಸಹ ಅಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ.

7. ನಾನು ಬೇಕರಿಯನ್ನು ಇಟ್ಟುಕೊಂಡಿದ್ದೆ ಸಾಕ್ಷಿ ಮುಂದುವರಿದು ಕೊರೋನಾ ಬಂದ ನಂತರ ಮುಚ್ಚಿರುತ್ತೇನೆ ಎಂದು ನುಡಿಯುತ್ತಾರೆ. ನಿಮಗೆ 1 ವರ್ಷಕ್ಕೆ ಎಷ್ಟು ಆದಾಯವಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಖರ್ಚು ವೆಚ್ಚ ಎಲ್ಲಾ ತೆಗೆದು ನನಗೆ ತಿಂಗಳಿಗೆ 60 ರಿಂದ 70 ಸಾವಿರ ಸಿಗುತ್ತದೆ ಎಂದು ನುಡಿಯುತ್ತಾರೆ. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ನನ್ನ ಆದಾಯ ತೆರಿಗೆಯ ದಾಖಲೆಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ನನ್ನ ಮನೆಯ ಖರ್ಚು ವೆಚ್ಚ ತಿಂಗಳಿಗೆ 10 ರಿಂದ 15 ಸಾವಿರ ಬರುತ್ತದೆ. ಆರೋಪಿಗೆ ಕೊಟ್ಟ ಹಣವನ್ನು ನಾನು ನನ್ನ ಬೇಕರಿಯಿಂದ ಬಂದ ಲಾಭದಿಂದ ಸೈಟು ತೆಗೆದುಕೊಳ್ಳಬೇಕೆಂದು ನನ್ನ ಬಳಿ ಇಟ್ಟುಕೊಂಡಿದ್ದೆ.

8. ಆರೋಪಿ ನಿಮಗೆ ನಿಪಿ-1 ನ್ನು ಯಾವಾಗ ಕೊಟ್ಟರು ಎಂದರೆ ಸಾಕ್ಷಿಯು ಪತ್ರ ಬರೆದುಕೊಡುವ ಸಮಯದಲ್ಲಿ ಕೊಟ್ಟರು ಎಂದು ನುಡಿಯುತ್ತಾರೆ. ನಾನು ಸದರಿ

ಚೆಕ್ಕನ್ನು ಕರ್ನಾಟಕ ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದ್ದೆ. ಆರೋಪಿ ನನ್ನ ಬಳಿ 5 ಲಕ್ಷ ರೂಪಾಯಿ ಹಣ ಸಾಲ ಪಡೆದುಕೊಳ್ಳುವ ಸಮಯದಲ್ಲಿ ಸಹಿ ಮಾಡಿದ ಖಾಲಿ ಚೆಕ್ಕನ್ನು ಕೊಟ್ಟಿದ್ದರು ಎಂದರೆ ಸಾಕ್ಷಿಯು ಇಲ್ಲ ಅವರು ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಬರೆದಿರುವ ಒಕ್ಕಣೆಗಳು ಆರೋಪಿಯದೇ ಆಗಿರುತ್ತದೆ. ನಿಪಿ-1 ರ ಚೆಕ್ ನಂಬರ್ ನ್ನು ಸಾಲದ ಆಧಾರದ ಪತ್ರದಲ್ಲಿ ಸಹ ನಮೂದಿಸಿದ್ದೇನೆ ಎಂದರೆ ಸರಿ. ಸಾಲದ ಪತ್ರವನ್ನು ಈ ಪ್ರಕರಣದಲ್ಲಿ ನೀವು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರು ಪಡಿಸಿಲ್ಲ ಆದರೆ ಪತ್ರವನ್ನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ನಿಪಿ-1 ರಲ್ಲಿ 7 ಲಕ್ಷ 24 ಸಾವಿರ ರೂಪಾಯಿ ಮೊತ್ತವನ್ನು ನಮೂದಿಸಿ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಸಂಬಂಧಿಸಿದಂತೆ ಬ್ಯಾಂಕಿನವರು ನೀಡಿದ ಹಿಂಬರಹದ ದಿನಾಂಕ ನನಗೆ ಗೊತ್ತಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಆಲಿಸಿ ನೀಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

(ರಾಧಾ ಎಸ್.)
C/c ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,
ಕನಕಪುರ